

ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ ಕೆ.ಜೈರಾಜ್ ಅವರು 'ವಾಟರ್‌ಪೋರ್ಟಲ್' ಕನ್ನಡ ವೆಬ್‌ಸೈಟ್‌ಗೆ ಚಾಲನೆ ನೀಡಿದರು. ಅರ್ಘ್ಯಂ ಪ್ರತಿಷ್ಠಾನದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸುನೀತಾ ನಡುಮನಿ, ಅಧ್ಯಕ್ಷೆ ರೋಹಿಣಿ ನಿಲೇಕಣಿ ಮತ್ತು ಇಂಡಿಯಾ ವಾಟರ್‌ಪೋರ್ಟಲ್ ಉತ್ಪಾದನಾ ವ್ಯವಸ್ಥಾಪಕ ವಿಜಯ್ ಕೃಷ್ಣ ಚಿತ್ರದಲ್ಲಿದ್ದಾರೆ. -ಪ್ರಜಾವಾಣಿ ಚಿತ್ರ

# ಗ್ರಾ.ಪಂ.: ನೀರು ಬಳಕೆ ಶುಲ್ಕ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಹಳ್ಳಿಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡುವ ಕೊಳವೆ ಬಾವಿ ಕೆಟ್ಟಿದ್ದರೆ, ಕೊಳವೆ ಮಾರ್ಗಗಳು ಒಡೆದು ಹೋಗಿದ್ದರೆ ಅವುಗಳ ದುರಸ್ತಿಗೆ ಇನ್ನು ಮುಂದೆ ಸರ್ಕಾರವೇ ಪೂರ್ಣ ಹಣ ಒದಗಿಸುವುದಿಲ್ಲ.

ತಮ್ಮ ಪಂಚಾಯ್ತಿ ವ್ಯಾಪ್ತಿಯ ನೀರು ಪೂರೈಕೆ ವ್ಯವಸ್ಥೆಗೆ ತಗಲುವ ವೆಚ್ಚವನ್ನು ಗ್ರಾಮಸ್ಥರೂ ಭರಿಸಬೇಕು. ಹೀಗಾಗಿ ಗ್ರಾಮ ಪಂಚಾಯ್ತಿಗಳಲ್ಲಿ ನೀರು ಬಳಕೆ ಶುಲ್ಕ ಏರಿಕೆ ಆಗಲಿದೆ. ಜತೆಗೆ ನೀರಿನ ಕರ ವಸೂಲಿಗೆ ಪರಿಣಾಮಕಾರಿ ವಿಧಾನವೂ ಜಾರಿಗೆ ಬರಲಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಪ್ರದೇಶದ ಕುಡಿಯುವ ನೀರು ಪೂರೈಕೆ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ನೀತಿಯನ್ನು ರೂಪಿಸಿದ್ದು, ಸರ್ಕಾರದ ಕಾರ್ಯನಿರ್ವಾಹಕ ಸಮಿತಿ ಅದಕ್ಕೆ ಒಪ್ಪಿಗೆ ನೀಡುವುದು ಬಾಕಿ ಉಳಿದಿದೆ.

ಇಂಡಿಯವಾಟರ್ ಪೋರ್ಟಲ್‌ನ ಕನ್ನಡದ ವೆಬ್‌ಸೈಟ್‌ಗೆ ಚಾಲನೆ ನೀಡಿ ಮಾತನಾಡಿದ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕೆ.ಜೈರಾಜ್ ಅವರು ಮೇಲಿನ ವಿಷಯ ತಿಳಿಸಿದರು.

'ಈಗ ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಪ್ರತಿ ಮನೆಯ ನೀರಿನ ಸಂಪರ್ಕಕ್ಕೆ ಮಾಸಿಕ ಶುಲ್ಕ 10ರಿಂದ 25 ರೂಪಾಯಿವರೆಗೆ ಇದೆ. ಈ ಶುಲ್ಕವನ್ನು ಆಯಾ ಗ್ರಾ.ಪಂ. ವ್ಯಾಪ್ತಿಯಲ್ಲಿ ಆಗುವ ವೆಚ್ಚಕ್ಕೆ ಅನುಗುಣವಾಗಿ ಹೆಚ್ಚಿಸಲಾಗುವುದು' ಎಂದು ಅವರು ವಿವರಿಸಿದರು.

'ರಾಜ್ಯದಲ್ಲಿ 1956ರಿಂದ ಇಲ್ಲಿಯವರೆಗೆ ಎರಡೂವರೆ ಲಕ್ಷಕ್ಕೂ ಹೆಚ್ಚು ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. 55 ಸಾವಿರ ನಲ್ಲಿ ನೀರು ಪೂರೈಕೆ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಇವುಗಳಲ್ಲಿ ಶೇಕಡಾ 25ಕ್ಕಿಂತ ಹೆಚ್ಚು ಕೆಟ್ಟು ಹೋಗಿವೆ' ಎಂದು ಅವರು ತಿಳಿಸಿದರು.

ರಾಜ್ಯದ 56 ಸಾವಿರ ಹಳ್ಳಿಗಳ ಪೈಕಿ 22 ಸಾವಿರ ಹಳ್ಳಿಗಳಲ್ಲಿ ನೀರು ಪೂರೈಕೆ ವ್ಯವಸ್ಥೆ ಸಮರ್ಪಕವಾಗಿಲ್ಲ. ವ್ಯವಸ್ಥೆ ಸರಿಪಡಿಸಲು ರಾಜ್ಯ ಸರ್ಕಾರ ಪ್ರತಿ ವರ್ಷ 700 ರಿಂದ 850 ಕೋಟಿ ರೂಪಾಯಿ ಖರ್ಚು ಮಾಡುತ್ತಿದೆ. ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಹೊಸ ನೀತಿ ರೂಪಿಸಲಾಗಿದೆ ಎಂದು ಜೈರಾಜ್ ವಿವರಿಸಿದರು.

'ಜಲ ನಿರ್ಮಲ ಯೋಜನೆಗೆ ವಿಶ್ವ ಬ್ಯಾಂಕ್‌ನಿಂದ 1000 ಕೋಟಿ ರೂಪಾಯಿ ಸಾಲ ಪಡೆಯಲಾಗುತ್ತಿದೆ. ಈ ಯೋಜನೆಯಲ್ಲಿ ರಾಜ್ಯದ 11 ಜಿಲ್ಲೆಗಳಲ್ಲಿ ಕೊಳವೆ ಮಾರ್ಗದ ಮೂಲಕ ನೀರು ಪೂರೈಕೆ ಮಾಡಲು ಉದ್ದೇಶಿಸಲಾಗಿದೆ' ಎಂದು ಅವರು ಹೇಳಿದರು.

'ರಾಜ್ಯಪಾಲರ ಸೂಚನೆಯಂತೆ ಮಾರ್ಚ್ 31ರೊಳಗೆ ರಾಜ್ಯದ ಎಲ್ಲ ಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಲಾಗುವುದು' ಎಂದು ನುಡಿದ ಅವರು, 'ಎಲ್ಲ ಗ್ರಾಮ ಪಂಚಾಯ್ತಿಗಳಿಗೆ ನೀರಿನ ಕುರಿತಾದ ಜ್ಞಾನ ಸಿಕ್ಕರೆ ಬಹಳಷ್ಟು ಸಮಸ್ಯೆಗಳು ಸುಲಭವಾಗಿ ಪರಿಹಾರವಾಗುತ್ತವೆ' ಎಂದರು.

ವೆಬ್‌ಸೈಟ್ ನಿರ್ಮಿಸಿರುವ ಸ್ವಯಂ ಸೇವಾ ಸಂಸ್ಥೆ 'ಅರ್ಘ್ಯಂ' ಸಂಸ್ಥೆ ಅಧ್ಯಕ್ಷೆ ರೋಹಿಣಿ ನೀಲೇಕಣಿ ಮಾತನಾಡಿ, 'ನೀರಿನ ಬಗ್ಗೆ ಸಮಗ್ರ ಮಾಹಿತಿಯನ್ನು ಒಳಗೊಂಡಿರುವ ಈ ಪೋರ್ಟಲ್ ವೃತ್ತಿಪರರು, ತಜ್ಞರು ಮತ್ತು ಸಾರ್ವಜನಿಕರ ನಡುವಿನ ವಿಚಾರ ವಿನಿಮಯ ವೇದಿಕೆ ಆಗಿದೆ' ಎಂದರು.

'ಕಳೆದ ವರ್ಷ ಪ್ರಧಾನಿ ಮನಮೋಹನಸಿಂಗ್ ಅವರು ಈ ಪೋರ್ಟಲ್ ಅನ್ನು ಉದ್ಘಾಟಿಸಿದರು. ಇದೀಗ ಕನ್ನಡ ವೆಬ್‌ಸೈಟ್ ಆರಂಭಿಸಿ ನೀರಿನ ಜ್ಞಾನ ಹಂಚಿಕೆಯಲ್ಲಿ ಹೆಚ್ಚು ಜನರನ್ನು ಒಳಗೊಳ್ಳಲು ಪ್ರಯತ್ನ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಇತರ ಭಾಷೆಗಳಲ್ಲೂ ನೀರಿನ ವೆಬ್‌ಸೈಟ್‌ಗಳನ್ನು ಆರಂಭಿಸಲಾಗುವುದು' ಎಂದು ಅವರು ಹೇಳಿದರು.

'ತಂತ್ರಜ್ಞರು, ಸಂಶೋಧನಾ ಸಂಸ್ಥೆಗಳು, ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರದ ಇಲಾಖೆಗಳು, ಇತಿಹಾಸ ತಜ್ಞರು, ಜಲ ವಿಜ್ಞಾನ ತಜ್ಞರು, ಮಾಹಿತಿ ತಂತ್ರಜ್ಞಾನ ಪರಿಣತರು ಮೊದಲಾದವರನ್ನು ಪಾಲುದಾರರಾಗಿರುವ ಈ ವೆಬ್‌ಸೈಟ್ ಮೂಲಕ ನೀರಿನ ಬಗ್ಗೆ ಜನ ಸಾಮಾನ್ಯರು ಸಂವಾದ ನಡೆಸಬಹುದು. ನೀರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕಳುಹಿಸಿದರೆ ತಜ್ಞರಿಂದ ಉತ್ತರ ಕೊಡಿಸಲಾಗುವುದು' ಎಂದು ಅವರು ನುಡಿದರು.

ಅರ್ಘ್ಯಂನ ಸಿ.ಎಸ್.ಶಾರದಾಪ್ರಸಾದ್ ವೆಬ್‌ಸೈಟ್‌ನ ತಾಂತ್ರಿಕ ವಿವರಣೆ ನೀಡಿದರು. ಮನೋಹರ್ ರಾವ್ ಸ್ವಾಗತಿಸಿದರು.

ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವಿಳಾಸ: www.indiawaterportal.org/kannada.

www.rohininilekani.org